Regd. No M. 1299 SATYAVADI Founded 1917

ಸತ್ಯವಾದಿ

(ಆರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟುದು)

ಸಂಪುಟ 30 ಸಂಚಿಕೆ 276 | ಶುಕ್ರವಾರ 27—6—47 | ಬಿಡಿ ಪ್ರತಿ 3 ಪೈ

ಮೈನಾರಿಟಿ ಸಂರಕ್ಷಣೆ

—

ಪಾಕೀಸ್ತಾನದಲ್ಲಿ ಹಿಂದೂಗಳಿಗೂ ಹಿಂದೂಸ್ತಾನದಲ್ಲಿ ಮುಸ್ಲಿಂರಿಗೂ ಸಂರಕ್ಷಣೆಗಳನ್ನೇರ್ಪಡಿಸಲು ಜಾಯಿಂಟು ಸಂಘವೊಂದು ಸ್ಥಾಪಿತವಾಗುವದು. ಅದರಲ್ಲಿ ಹಿಂದೂಸ್ತಾನದಲ್ಲಿಯ ಮುಸ್ಲಿಂರಿಗೆ ಮತವೆಂದರೆ ಮಶೀದಿಗಳು ವಿವಾಹಗಳು, ಶ್ರಾದ್ಧಗಳು, ಕಬರ ಸ್ಥಾನಗಳು, ವೇಷಭಾಷೆಗಳು ಮತಗ್ರಂಥಗಳು ಎಲ್ಲವೂ ರಕ್ಷಿಸಲ್ಪಡಬೇಕಾದವೇ. ಅದೇ ಬಗೆಯಲ್ಲಿ ಪಾಕೀಸ್ತಾನದಲ್ಲಿ ಹಿಂದುಗಳಿಗೆ ಸಂರಕ್ಷಣೆಗಳವ್ದಲ್ಲಿ ಇನ್ನು ಇಲ್ಲದಿರುವದು ಯಾವುವು ? ಆಗ ಹಿಂದೂಸ್ತಾನದಲ್ಲಿಯ ಹಿಂದೂಗಳಿಗಿಂತ ಪಾಕೀಸ್ತಾನದ ಹಿಂದೂಗಳು ಹೆಚ್ಚು ಸ್ವಾತಂತ್ರ್ಯಗಳನ್ನೇ ಅನುಭವಿಸುತ್ತಾರೆ. ಹಿಂದೂಸ್ತಾನು ಜಾತೀಯ ಪರಿಷತ್ತಿನಿಂದ ಜಾಯಿಂಟ್ ಸಂಘಕ್ಕೆ ಹೋಗುವ ಸಭ್ಯರು ಪಾಕೀಸ್ತಾನದಲ್ಲಿಯ ಹಿಂದುಗಳಿಗೆ ಯಾವ ಬಗೆಯ ರಕ್ಷಣೆಗಳನ್ನು ಕೋರುವರೋ ನೋಡಬೇಕಾಗಿದೆ.

ಇದಲ್ಲವೇ ನಾಗರಿಕತೆ !

69 ವರ್ಷ ವಯಸ್ಸಿನ ಯುವಕನೊಬ್ಬನೂ 67 ವರ್ಷ ವಯಸ್ಸಿನ ಹುಡುಗ ? ನೊಬ್ಬನೂ ಸ್ತ್ರೀಯೊಬ್ಬಳಿಗಾಗಿ ಹೊಡೆದಾಡಿಕೊಂಡು ಗಾಯಗಳಾಗಲು ನ್ಯೂಯಾರ್ಕಿನ ಆಸ್ಪತ್ರೆಯಲ್ಲಿ ಸೇರಿಸಲ್ಪಟ್ಟಿರುವರು.

ಸೇಟ್ ದಾಲ್ಮಿಯು

ಸುಪ್ರಸಿದ್ಧ ವರ್ತಕ ಶಿಖಾಮಣಿ ಸೇಟ್ ದಾಲ್ಮಿಯವರು ವ್ಯಾಪಾರವನ್ನೂ ಸಾಕು ಮಾಡಿಕೊಂಡು ಎಶ್ಯಾಂಶಿಯನ್ನು ಪಡೆಯಲಿರುವರು.

ಛಾರ್ಲಿ ಚಾಪ್ಲಿನ್

ಸುಪ್ರಸಿದ್ಧ ಚಲನ ಚಿತ್ರ ನಟ ಶೇಖರನಾದ ಛಾರ್ಲಿ ಚಾಪ್ಲಿನ್ನು ಅಮೇರಿಕಾ ವರ್ತಸತನನ್ನು ಹೊಂದಲು ನಿರಾಕರಿಸಿದ್ದರಿಂದ ಬ್ರಿಟನ್ನಿಗೆ ಕಳುಹಿಸಲು ಅಮೆರಿಕರು ಯತ್ನಿಸುತ್ತಿರುವರು.

—

ಬಟ್ಟೆ ಮತ್ತು ನೂಲಿನ ನಿಯಂತ್ರಣ ತೆಗೆದು ಹಾಕಬೇಕೆಂದು ಮದ್ರಾಸ ಸರಕಾರವು ಹಿಂದುಸ್ತಾನ ಸರಕಾರಕ್ಕೆ ಸೂಚಿಸಿದೆ.

'ಜರ್ಮನಿಯು ಮತ್ತೆ ಎಚ್ಚೆತ್ತುಕ್ಕೊಳ್ಳುವುದು'

ಲೆಂಡನ್ ಜೂ 25— ನಾಜೀ ವಿಮಾನ ಪಡೆಗಳ ಮೇಜರ್ ಜನರಲ್ ಗಾಲೆಂಡರ ಧ್ವನಿಕೂಡಿದ ವಾಣಿ-ಯು ಗುಟ್ಟಾದ ರೇಡಿಯೋ ಪುಲ್ಕ, ರಷ್ಯಾ ಭಾಗದ ಜರ್ಮನಿಯಲ್ಲಿ 'ಜರ್ಮನಿಯು ಮತ್ತೆ ಎಚ್ಚೆತ್ತುಕ್ಕೊಳ್ಳುವುದು, ಧೈರ್ಯ ಯಂದಿರ್, ಹೆದರಬೇಡಿ' ಎಂದು ಸಾರಿದೆ

ಲಂಡನ್ ಜೂ 24 — ಆಲ್ಡ್ವಿಚ್ನಲ್ಲಿರುವ ಇಂಡಿಯಾ ಹೌಸ್ ಪಾಕೀಸ್ತಾನಕ್ಕೆ ಸೇರುವುದೇ ಹಿಂದೂಸ್ತಾನಕ್ಕೆ ಸೇರುವುದೇ ಎಂಬ ವಿಷಯವು ಗಮನಾರ್ಹವಾಗಿದೆ.

ಲಂಡನ್ ಜೂ 24 — ಆಸ್ಪೃಶ್ಯರ ಆಸ್ಪತ್ರೆಗಾಗಿ ಹಣ ಶೇಖರಿಸಲು 50 ಸಾವಿರ ಪೌಂಡು ಬೆಲೆಯ ವಜ್ರದಿಂದ ಕೂಡಿರುವ ಸೀರೆಯೊಂದು ಬ್ರಿಟನ್ನಿಂದ ಭಾರತಕ್ಕೆ ಹರಲಿದೆ. ಇದು ಸಾರಫ್ಲೋಕಿನ ಡಾ|| ಹತ್ ಫ್ರೇಜರ್‌ರವರದು, ಇಲ್ಲಿ ಮೆಡಿಕಲ್ ಮಿಷನರಿಯಾಗಿದ್ದಾಗ ಅವರಿಗೆ ಬಹುಮಾನವಾಗಿ ಕೊಡಲಾಗಿತ್ತು.

ಜರೂಸೆಲಂ ಜೂ 25 — 4 ಮಂದಿ ಯಹೂದ್ಯ ಭಯೋತ್ಪಾತಕರು ಪ್ಯಾಲಿಸ್ಟೈನ್ ಸರಕಾರಿ ಆಫೀಸರಾದ ಆಲಂನೇಜರ್ ಎಂಬುವನ ವಾಸಸ್ಥಾನಕ್ಕೆ ನುಗ್ಗಿ ಅವನನ್ನು ಹಾರಿಸಿಕೊಂಡು ಹೋಗುವ ಪ್ರಯತ್ನದಲ್ಲಿದ್ದರು. ಆದರೆ ಆಕೆಯ ಹೆಂಡತಿ ಕೂಗಿ ಗಲಾಟೆ ಹಬ್ಬಿಸಲು ಓಡಿಹೋದರು.

ಪ್ಯಾರಿಸ್ ಜೂ 25 — ಗಣಿ ಕೆಲಸಗಾರರ ಮುಷ್ಕರ ಫ್ರಾನ್ಸಿನಲ್ಲಿ ಹೆಚ್ಚಾಗಿ ಹಂಡಿದೆ.

ಇಂದಿನ ವರ್ತಮಾನ

ಸೈಗಾಂ ಜೂ 25 — ಇಂಡೋಚೈನಾದಲ್ಲಿ ನಿರ್ಬಂಧದಲ್ಲಿಡಲ್ಪಟ್ಟಿರುವ ಭಾರತೀಯರು ಬಿಡುಗಡೆಯಾಗಬಹುದೆಂದು ಹೇಳಲಾಗಿದೆ.

ನವದೆಹಲಿ ಜೂ 25— ಲಂಡನ್ನಿನಲ್ಲಿ ಜುಲೈ 15 ರಲ್ಲಿ ನಡೆಯುವ ನೌಕಾ ಮಾಲೀಕರ ಸಮ್ಮೇಳನಕ್ಕೆ ಹೋಗುವ ಭಾರತ ಪ್ರತಿನಿಧಿಗಳ ಪೈಕಿ ಮೈಸೂರು ದಿವಾನರಾದ ಸರ್ ರಾಮಸ್ವಾಮಿ ಮೊದಲಿಯಾರರು ಒಬ್ಬರಾಗಿದ್ದಾರೆ.

ಲಂಡನ್ ಜೂ 25— ಹೊಸ ಭಾರತರೆ ಮಸೂದೆಯು ಜುಲ್ಲೈ ಕಡೆಯೊಳಗಾಗಿ ಶಾಸನವಾಗುವುದೆಂದು ಹೇಳಲಾಗಿದೆ.

ಮದರಾಸು ಜೂ 26 — ರೂ. 30 ಸಾವಿರ ಬೆಲೆಯ 270 ತೊಲಾ ಭಂಗಾರವನ್ನು ವಿಮಾನ ನಿಲ್ದಾಣದಲ್ಲಿ ಕೊಲಂಬೋದಿಂದ ಬಂದು ಇಳಿದ ಒಬ್ಬ ಪ್ರಯಾಣೀಕನ ಹತ್ತಿರ ವಿದ್ದುದು ವಶಪಡಿಸಿಕೊಳ್ಳಲಾಯಿತು.

ಪೆಷಾವರ್ ಜೂ 28— ಗಡಿನಾಡಿನ ಕಾಂಗ್ರೆಸ್ಸು ರೆಫರೆಂಡಂನಲ್ಲಿ ಭಾಗವಹಿಸಲು ತಿರಸ್ಕರಿಸಿರುವದು, ಅದು ತನ್ನ ಸೋಲನ್ನು ಒಪ್ಪಿಕೊಂಡಂತಾಯಿತೆಂದೂ, ಪಠಾಣಿಸ್ತಾನವನ್ನು ಕೇಳುವುದು ಹಿಂದೂಸ್ತಾನಕ್ಕೆ ಸೇರಲು ಅಸತ್ಯ ಪ್ರಯತ್ನವೆಂದೂ, ಲೀಗ್ ನಾಯಕರಾದ ಖಾನ್ ಅಬ್ದುಲ್ ಕ್ವಯಾಂ ಖಾನರು ಹೇಳಿದ್ದಾರೆ.

ಕ್ಯಾಂಟನ್ ಜೂ 25— ದಕ್ಷಿಣ ಚೈನಾದ ನೆರೆಹಾವಳಿ ವಿಪರೀತವಾಗಿದ್ದು 1000 ಮಂದಿ ಮೃತರಾದರು 5 ಲಕ್ಷ ಮಂದಿ ನಿರಾಶ್ರಿತರಾದರು.

ಕರಾಚಿ ಜೂ 26 — ಹೊಸ ಪಾಕೀಸ್ತಾನ ಸರಕಾರದ ಕೆಲವು ಆಫೀಸುಗಳ ಕಟ್ಟಡ ಕಟ್ಟೋಣವು ಸರಕಾರದ 160 ಸಾವಿರ ಚದುರುಗಜ ಭಾಗದಲ್ಲಿ ಪ್ರಾರಂಭಿಸಲಾಗಿದೆ.

ನ್ಯಾಯವಿಧಾಯಕ ಸಭೆ

—

ಸ್ವಂ ಸು | ಬೆಂಗಳೂರು ಜೂ 25 ಪ್ರಶ್ನೋತ್ತರದಲ್ಲಿ ಶ್ರೀ ವೆಂಕಾಜಿಯವರು ಗಂಧದ ಎಣ್ಣೆ ಮಾರಾಟದ ಬೆಲೆ ವ್ಯತಾಸಗಳ ಬಗ್ಗೆ ತೀವ್ರ ಪ್ರಶ್ನೆಗಳನ್ನು ಹಾಕಿದರು.

ಶ್ರೀ ಸಯದ್ ಅಬ್ದುರ್ ರಹಿಮ್ ಪಬ್ಲಿಕ್ ಸರ್ವಿಸ್ ಕಮಿಶೋಷನ್‌ನಲ್ಲಿ ಮುಸ್ಲಿಮರ ಹಿತಕ್ಕೋಸ್ಕರ ಒಬ್ಬ ಮುಸ್ಲಿಂ ಸದಸ್ಯರು ಇರಬೇಕು ಎಂದರು. ಅನೇಕರು ಪ್ರತಿಭಟಿಸಿದರು

ಶ್ರೀ ಬೇಲೂರು ಶ್ರೀನಿವಾಸಯ್ಯಂಗಾರ್ರು ತಮ್ಮ ಸ್ವಾಭಾವಿಕ ವಿನೋದ ದೃಷ್ಟಿಯಿಂದ ಮಾತಾಡಿ ವಿರೋಧಿಸಿದರು.

ಶ್ರೀ ಮೂಡಯ್ಯ (ಅ. ಕ.) ತಮ್ಮ ಪಕ್ಷದವರಾದ ಎತ್ತಿ ಬಹಳ ದಿಟ್ಟವಾಗಿ ವಾದಿಸಿ ಮಾತಾಡಿದರು. ಪೋತಾ ನಿರ್ಣಯದಲ್ಲಿ.

ಶ್ರೀ ಗಂಗಾಧರಯ್ಯ (ಅ. ಕ.) ತಮ್ಮ ಪೋತಾ ನಿರ್ಣಯವನ್ನು ಪುಷ್ಟಿಕರಿಸಿ ಮಾತಾಡಿದಾಗ ತಮ್ಮ ಜನಾಂಗಕ್ಕೆ ಸರಿಯಾದ ಪ್ರಾತಿನಿಧ್ಯ ಕೋರಿಸಿಕೊಡದಿದ್ದರೆ ನಾವು ಕೆತ್ತು ಕೊಳ್ಳುತ್ತೆವೆ. ನಮ್ಮಲ್ಲಿ ಅನೇಕ ಗ್ರಾಜುಯೆಟರುಗಳು ಅರ್ಹರು ಇದ್ದಾರೆ. ಎಂದು ಹೇಳಿದರು.

ಈಸೂರು ಗಲಭೆಯಲ್ಲಿ ಶಿಕ್ಷಿತರಾದವರಲ್ಲಿ 13 ಜನವನ್ನು ಬಿಟ್ಟಿದ್ದೆವೆಂದು ಮಂತ್ರಿಗಳಾದ ಶ್ರೀ ಶೇಷಾದ್ರಿಗಳು ಸಭೆಯ ಮುಂದೆ ತಿಳಿಸಿದರು.

ಕ್ಯುಮುಲೆಟಿವು ವೋಟಿಂಗ್‌ನ್ನು ನಿರೋಧಿಸಿ ಕಾಂಗ್ರೆಸ್ ಸದಸ್ಯರು ಮಾತಾಡಿದರು, ಜಿಲ್ಲಾ ಬೋರ್ಡು ಆಯಿಕೆಯ ಅನುಭವವನ್ನು ಸಭೆಯ ಮುಂದಿಟ್ಟರು. ಸರಕಾರದ ಉತ್ತರ ಸರಿಯಾಗಿದೆ. ಎಂದು ಮಂತ್ರಿ ಷರೀಫರು ವತ್ತಿ ಹೇಳಿದರು. ನಿರ್ಣಯ ಬಿದ್ದು ಹೊಯ್ತು.

ಶ್ರೀ ನಾಗಯ್ಯರೆಡ್ಡಿಯವರು — ಗಂಧದ ಎಣ್ಣೆ ಮತ್ತು ಸಾಬೂನು ಕಾರ್ಖಾನೆಗಳ ಏಜೆನ್ಸಿ ಬಗ್ಗೆ ಪ್ರಶ್ನಿಸಿದರು.

ಯಾರಿಗೆ ಏಕ ಮಾತ್ರ ಏಜೆನ್ಸಿ ಕೊಟ್ಟಲ್ಲಾ ಈಗಲಾದರೂ ಇಲ್ಲಾ ಎಂದು ಉತ್ತರವಾಯಿತು.

ಅನೇಕ ಪೋತಾ ನಿರ್ಣಯಗಳು ಜರ್ಜಿಗೆ ಬಂದು ಕೆಲವು ವಾಪಸ್ ತೆಗೆದು ಕೊಳ್ಳಲ್ಪಟ್ಟವು.

ಕೊರಿಯಾ

ಇದುವರೆಗೂ ಜಪಾನೀಯರು ಕೊ ರಿಯಾವನ್ನು ಮೋಸಗೊಳಿಸಿ ಜಪಾನಿ ನೊಂದಿಗೆ ಸೇರಿಸಿಕೊಂಡಿದ್ದರು ಎ ಷ್ಟ ಕಾಲದವರೆಗೋ ಜಪಾನಿನ ದಾಸ್ಯ ತ್ವದಲ್ಲಿ ಕೆಂಗೆಟ್ಟು ಸ್ವಾತಂತ್ರ್ಯಕ್ಕಾಗಿ ಕೊರಿಯಾ ಒದ್ದಾಡುತ್ತಿತ್ತು. ಅದೃ ಷ್ಟ ವಶಾತ್ ಕಳೆದ ಯುದ್ಧದಲ್ಲಿ ಕೂರಿ ಯಾ ಅದೃಷ್ಟವಂತವಾಯಿತು. ಈಗ ಐಂಗ್ಲೋ ರಷ್ಯ್ಯ ಸಂಯುಕ್ತ ಸಂಘದ ರಕ್ಷಿಸಾಲನೆಯಲ್ಲಿರುವ ಕೊರಿಯಾದಲ್ಲಿ ತಾತ್ಕಾಲಿಕ ಜಾತೀಯ ಸರ್ಕಾರವನ್ನು ಏರ್ಪಡಿಸಲಿರುವದಾಗಿ ಆ ಸಂಘದವರು ತಿಳಿಸಿರುತ್ತಾರೆ. ಹೀಗೆ ಮಾಡಿದಲ್ಲಿ ಏಕ್ಯ ರಾಜ್ಯ ಸಮಿತಿಯ ಮಹದಾಶ ಯಗಳಲ್ಲಿ ಪೂರ್ವೆ ರಾಜ್ಯಗಳಿಗೆ ಸ್ವಲ್ಪ ನಂಬಿಕೆಯು ಹುಟ್ಟುವ ಸಂಭವವಿದೆ.

ಶ್ರೀರಂಗಪಟ್ಟಣ

ಕ್ಷಂ. ಸು.], ಜೂನ್ 25

ಈ ಊರಿನಲ್ಲಿ ತೋಗರಿಬೇಳೆ ಸಿಕ್ಕ ದೆ ಜನಗಳು ಕಾಳುಗಳನ್ನು ತಿನ್ನುತ್ತ ಇ ರುತ್ತಾರೆ ಅದರಿಂದ ಜನಗಳಿಗೆ ಆರೋ ಗ್ಯವೆ ಇರುವುದಿಲ್ಲ ಈ ಊರಿನ ಡಿ ಪೊವಿನಲ್ಲಿ 8 ಆಣೆಗೆ ಮಾತ್ರ ತೋಗರಿ ಬೇಳೆ ಕೊಡುತ್ತ ಇರುತ್ತಾಳೆ. ಅದು ಸಾಲದೆ ಇರುತ್ತೆ. ಈಗಲಾದರೂ ಒಂ ದು ಕಾರ್ಡಿಗೆ 1 ರೂಪಾಯಿನಂತೆ ತೊ ಗರಿಬೇಳೆಯನ್ನು ಕೊಡುವಂತೆ ಮಾಡು ತ್ತಾರೆಂದು ನಂಬಿರುತ್ತೆ.

ಈ ಊರಿನಲ್ಲಿ ಹಾಲು ಮಾರುವರು ವಿಪರೀತವಾಗಿ ನೀರು ಬೆರಸಿ ರೂಪಾ ಯಿಗೆ ಮೂರು ಸೇರಿನಂತೆ ಮಾರುತ್ತಾ ಇರುತ್ತಾರೆ. ಇದು ಬಹಳ ಅನ್ಯಾಯ ವಾಗಿರುತ್ತೆ. ಇದಕ್ಕೆ ಸಂಬಂಧಪಟ್ಟವ ರು ಸಿಗಾ ಕೊಡಬೇಕು.

ಮೈಸೂರು ಸಿಟಿ ರೇಷನಿಂಗ್

No. R 6 - 81 / 46-7

1947 ನೇ ಇಸವಿ ಜೂನ್ ಮಾಹೆ 30 ನೇ ತಾರೀಖಿನ ದಿವಸ ಮೈಸೂರು ಸಿಟಿಯಲ್ಲಿರುವ ಎಲ್ಲಾ ಸರ್ಕಾರೀ ಡಿಪೋ ಮೊಹಲ್ಲಾ ಸಬ್ ಗೋಡೌನ್, ಪರ್ತಕರ ಡಿಪೋ ಮತ್ತು ಸಹಕಾರ ಸಂಘಗಳಲ್ಲಿ ರುವ ದಿನಸಿಗಳ ಎಣಿಕೆ ಮಾಡಬೇಕಾಗಿ ರುವುದರಿಂದ ಆ ದಿವಸ ಡಿಪೋಗಳು ಮುಚ್ಚಲ್ಪಡುತ್ತವೆ.

(ಸಹಿ) ಅಬ್ದುಲ್ ರಜಾಕ್
ರೇಷನಿಂಗ್ ಆಫೀಸರ್
ಮೈಸೂರು ಸಿಟಿ



SHAKTI SUDHA

A Superb TONIC

At Opera 11th Glorious Week

RAJAKUMARI

ಟಿ. ಎಸ್. ಬಾಲಯ್ಯ, ತವಮಣಿದೇವಿ, ಮಾಲತಿ ರಾಮಚಂದ್ರ ನಟಿಸಿರುವ

ರಾಜಕುಮಾರಿ

(ತಮಿಳು)

ಶ್ರೀ 'ಓಂ' ಗುರುತಿನ

ಅರಿಸಿದ ಪರಿಶುದ್ಧ ಕೇಸರಿ

ಈ ಶ್ರೀ ಓಂ ಗುರುತಿನ ಕೇಸರಿಯು ಗ್ಯಾರಂಟಿಯಾಗಿ ಪರಿಶುದ್ಧವಾದುದು. ಸ್ಪೇನ್ ದೇಶದಲ್ಲಿಯು ಕೆಸರಿ ಗಿಡಗಳಿಂದ ಅರಿಸಲ್ಪಟ್ಟ ಹೂಗಳಿಂದ ಕಿತ್ತಲ್ಪಟ್ಟು ಆರಿಸ ತೆಗೆಯಲ್ಪಟ್ಟಿದಾಗಿದೆ. ಇದರಲ್ಲಿ ಏನೆಂದು ಆಕ್ಷೇಪಣೀಯ ಪದಾರ್ಥವೂ ಸೇರಿಲ್ಲ ಮತ್ತು ಧಾರ್ಮಿಕವಾಗಿಯೂ ಪರಿಶುದ್ಧವಾದುದು. ದೇವಾಲಯಗಳಲ್ಲಿಯೂ ದೇವರ ಪೂಜೆಗೂ ಮತ್ತಾಚಾರ ಸಮಾರಂಭಗಳಲ್ಲಿಯೂ ಎಲ್ಲ ಸಂತೋಷ ಮತ್ತು ಸಾಂಘಿಕ ಕೂಟಗಳಲ್ಲಿಯೂ ಉಪಯೋಗಿಸಲ್ಪಡತಕದ್ದಾಗಿದೆ. ಎಂದು ಶಿಪಾರಸ್ ಮಾಡಲ್ಪಟ್ಟಿದೆ

ವಲ್ಲಭದಾಸ್ ತೇಜ್‌ಪಾಲ್,

(ಹಿಂಗು, ಕೇಸರಿ ಮತ್ತು ಕಿರಾಣ ವ್ಯಾಪಾರಿಗಳು)

ಗೋವಿಂದಪ್ಪ ನಾಯಕ್ ರಸ್ತೆ, ಜಿ. ಟಿ. ಮದರಾಸು.

ಸತ್ಯವಾದಿ — ಅರ್ಧ ಆಣೆ

ದಿನ ಪತ್ರಿಕೆ. ತಿಂಗಳಿಗೆ ಆರಾಣೆ
ವಾರ್ಷಿಕ ಚಂದ ಪಂಸ್ಥಳಕ್ಕೆ ಅಂಚೆವೆಚ್ಚ ಸೇರಿ ರೂ. 9
ಸೋಮವಾರದ ಸಂಚಿಕೆ ಮಾತ್ರ ವಾರ್ಷಿಕಚಂದಾ
ಪರಸ್ಥಳಕ್ಕೆ ಅಂಚೆವೆಚ್ಚ ಸೇರಿ 1-12-0

ಸಾಮಾಜಿಕ ಭಾವಪರಿಪೂರ್ಣವಾದ ಕತೆ
ಓದಲು ಪ್ರಾರಂಭಿಸಿದರೆ ಕಥೆ ಪೂರೈಸುವರೆಗೂ ಊಟಕ್ಕೆ ಕೂಡ ಏಳಲು ಮನ ಸ್ಸಾಗುವುದಿಲ್ಲ. ಬೆಲೆ 6 ಆಣೆ, ಪೋಸ್ಟೇಜು 1 ಆಣೆ. ಮುಂಗಡ ಕಳುಹಿಸಬೇಕು
ದೊರೆಯುವ ಸ್ಥಳ—
ಸತ್ಯವಾದಿ ಆಫೀಸ್, ಮೈಸೂರ

Edited, Printed and Publishedby M. S Krishna Rao at the Satyavadi Press Chamaraj Agrahar, Mysore.